**All India Radio: Bangalore**
**National Bulletin In Kannada**
**04.12.2025 1.10 pm.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><><*><><<>**

ಮುಖ್ಯಾಂಶಗಳು

**೧. ಚೀತಾಗಳ ಸಂರಕ್ಷಣೆಯಿಂದ ಜೀವ-ವೈವಿಧ್ಯ ಬಲವರ್ಧನೆ ಜೊತೆಗೆ ಜೈವಿಕ ಪರಂಪರೆಯ ಪುನರುತ್ಥಾನ - ಪ್ರಧಾನಿ ನರೇಂದ್ರ ಮೋದಿ**

**೨. ಸಂಸತ್ತಿನಲ್ಲಿ ಪ್ರತಿಯೊಂದು ವಿಷಯದ ಬಗ್ಗೆಯೂ ಚರ್ಚೆಗೆ ಸರ್ಕಾರ ಸಿದ್ಧ - ಸಚಿವ ಜೆ.ಪಿ. ನಡ್ಡಾ**

**೩. ಜಲಜೀವನ್ ಮಿಷನ್ ಅಡಿ ೧೫ ಕೋಟಿ ಕುಟುಂಬಗಳಿಗೆ ಶುದ್ಧ ಕುಡಿಯುವ ನೀರಿನ ಕೊಳಾಯಿ ಸಂಪರ್ಕ- ಸಚಿವ ಸಿ.ಆರ್. ಪಾಟೀಲ್**

**೪. ದೇಶಾದ್ಯಂತ ಇಂದು ನೌಕಾದಿನಾಚರಣೆ ; ರಾಷ್ಟ್ರ ರಕ್ಷಣೆಯಲ್ಲಿ ಪಡೆಯ ಪಾತ್ರ ಶ್ಲಾಘನೆ ; ರಾಷ್ಟ್ರಪತಿ ಸೇರಿ ಗಣ್ಯರ ಶುಭಾಶಯ**

**೫. ದೋಹಾದಲ್ಲಿ ಇಂದಿನಿಂದ ಶೂಟಿಂಗ್ ವಿಶ್ವಕಪ್ ಫೈನಲ್ಸ್ ; ಭಾರತದ ೧೫ ಶೂಟರ್‌ಗಳ ಸೆಣಸು**

**<><><*><><<>**

ಇಂದು ಅಂತಾರಾಷ್ಟ್ರೀಯ ಚೀತಾ ದಿನ. ಅದರ ಅಂಗವಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಚೀತಾ ಸಂರಕ್ಷಣೆಯಲ್ಲಿ ತೊಡಗಿರುವ ಎಲ್ಲ ಕಾರ್ಯಕರ್ತರು ಹಾಗೂ ವನ್ಯಜೀವಿ ಪ್ರಿಯರಿಗೆ ಶುಭ ಕೋರಿದ್ದಾರೆ. ಪ್ರಧಾನಿ ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಚೀತಾ ಭೂಮಿ ಮೇಲಿನ ಅತ್ಯಂತ ವಿಶಿಷ್ಟ ಪ್ರಾಣಿಯಾಗಿದ್ದು, ಮೂರು ವರ್ಷಗಳ ಹಿಂದೆ ಆರಂಭಿಸಲಾದ ಪ್ರಾಜೆಕ್ಟ್ ಚೀತಾ ಯೋಜನೆ ಯಶಸ್ವಿಯಾಗಿದೆ ಎಂದು ಹೇಳಿದ್ದಾರೆ. ಅಲ್ಲದೇ ಸುಂದರ ಪ್ರಾಣಿಯನ್ನು ಸಂರಕ್ಷಿಸುವ ಗುರಿಯೊಂದಿಗೆ ಹಾಗೂ ಅದಕ್ಕೆ ಪೂರಕ ಪರಿಸರ ನಿರ್ಮಾಣ ಉದ್ದೇಶದಿಂದ ಯೋಜನೆ ಕೈಗೊಳ್ಳಲಾಯಿತು. ಇದರಿಂದ ನಮ್ಮ ಜೀವ-ವೈವಿಧ್ಯ ಪರಿಸರ ಬಲವರ್ಧನೆಯಾಗಿರುವುದಲ್ಲದೇ ನಾವು ಕಳೆದುಕೊಂಡಿರುವ ಜೈವಿಕ ಪರಂಪರೆಯೂ ಪುನರುತ್ಥಾನವಾಗುತ್ತಿದೆ ಎಂದು ಪ್ರಧಾನಿ ಹೇಳಿದ್ದಾರೆ. ಚೀತಾ ಪ್ರವಾಸೋದ್ಯಮ ದಿನೇ ದಿನೇ ಜನಪ್ರಿಯವಾಗುತ್ತಿರುವುದು ಸಂತೋಷದ ಸಂಗತಿ ಭಾರತ ಹಲವು ಚೀತಾಗಳಿಗೆ ನೆರೆಯಾಗಿರುವುದು ಹೆಮ್ಮೆ ಎನಿಸುತ್ತದೆ ಮತ್ತು ಅವುಗಳಲ್ಲಿ ಬಹುತೇಕ ಚೀತಾಗಳು ಭಾರತದ ನೆಲದಲ್ಲೇ ಜನಿಸಿದೆ ಎಂದು ಅವರು, ಜಗತ್ತಿನಾದ್ಯಂತ ಇರುವ

ಹೆಚ್ಚಿನ ವನ್ಯಜೀವಿ ಪ್ರಿಯರು ಭಾರತಕ್ಕೆ ಭೇಟಿ ನೀಡಿ, ಚೀತಾಗಳ ಸೌಂದರ್ಯವನ್ನು ಕಣ್ತುಂಬಿಕೊಳ್ಳಬೇಕು ಎಂದು ಕರೆ ನೀಡಿದ್ದಾರೆ.

ಚೀತಾಗಳ ಸಂರಕ್ಷಣೆಗೆ ಸಾರ್ವಜನಿಕರು ವ್ಯಾಪಕ ಬೆಂಬಲ ನೀಡುತ್ತಿದ್ದಾರೆ ಎಂದು ಶ್ಲಾಘಿಸಿರುವ ಪ್ರಧಾನಿ ಜನರ ಸಾಮೂಹಿಕ ಬೆಂಬಲ ವಿಶೇಷವಾಗಿ ಚೀತಾ ಮಿತ್ರರ ಬೆಂಬಲವಿಲ್ಲದಿದ್ದರೆ ಇಷ್ಟು ಪ್ರಗತಿ ಸಾಧಿಸಲು ಸಾಧ್ಯವಾಗುತ್ತಿರಲಿಲ್ಲ ಎಂದು ಹೇಳಿದ್ದಾರೆ.

ವನ್ಯಜೀವಿ ಸಂರಕ್ಷಣೆ ಮತ್ತು ನಿಸರ್ಗದೊಂದಿಗೆ ಸಹಭಾಳ್ವೆ ನಡೆಸುವುದು ಭಾರತದ ನಾಗರಿಕ ಪರಂಪರೆಯ ಅವಿಭಾಜ್ಯ ಅಂಗವಾಗಿದೆ. ಅದೇ ಸ್ಫೂರ್ತಿಯನ್ನು ನಮ್ಮ ಈ ಪ್ರಯತ್ನಗಳಲ್ಲಿ ಜೀವಂತವಾಗಿ ಕಾಣಬಹುದಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

**<>><><*><><<>**

ತಾವು ಪ್ರಸ್ತಾಪಿಸುತ್ತಿರುವ ವಿಷಯಗಳ ಚರ್ಚೆಗೆ ಸರ್ಕಾರ ಅವಕಾಶ ನೀಡುತ್ತಿಲ್ಲ ಎಂಬ ಪ್ರತಿಪಕ್ಷಗಳ ಆರೋಪವನ್ನು ಕೇಂದ್ರ ಸಚಿವ ಹಾಗೂ ರಾಜ್ಯಸಭೆಯ ಆಡಳಿತ ಪಕ್ಷದ ನಾಯಕ ಜೆ.ಪಿ. ನಡ್ಡಾ ತಳ್ಳಿ ಹಾಕಿದ್ದಾರೆ. ರಾಜ್ಯಸಭೆಯಲ್ಲಿಂದು ಪ್ರತಿಪಕ್ಷದ ನಾಯಕ ಎಂ. ಮಲ್ಲಿಕಾರ್ಜುನ ಖರ್ಗೆ ಅವರು, ಮಾಡಿದ ಆರೋಪಗಳಿಗೆ ಪ್ರತಿಕ್ರಿಯಿಸಿದ ಜೆ.ಪಿ. ನಡ್ಡಾ ಸರ್ಕಾರ ಸಂಸತ್ತಿನಲ್ಲಿ ಪ್ರತಿಯೊಂದು ವಿಷಯದ ಬಗ್ಗೆಯೂ ಚರ್ಚೆ ಮಾಡಲು ಸಿದ್ಧವಿದೆ. ಪ್ರತಿಪಕ್ಷಗಳು ಮಂಡಿಸುತ್ತಿರುವ ಯಾವುದೇ ವಿಷಯದ ಚರ್ಚೆಯನ್ನು ತಪ್ಪಿಸುವ ಉದ್ದೇಶವಿಲ್ಲ ಎಂದು ಹೇಳಿದ್ದಾರೆ. ಅಲ್ಲದೇ ಸದನದಲ್ಲಿ ನಡೆಯಬೇಕಿರುವ ಪ್ರತಿಯೊಂದು ವಿಷಯಗಳ ಬಗ್ಗೆಯೂ ಪೂರ್ಣ ಪ್ರಮಾಣದಲ್ಲಿ ಚರ್ಚೆ ನಡೆಸಲು ಸರ್ಕಾರ ಸಮಯವನ್ನು ನಿಗದಿಪಡಿಸಿದೆ ಎಂದ ಅವರು, ಈ ಕುರಿತು ಸರ್ವಪಕ್ಷಗಳ ಸಭೆಯಲ್ಲಿ ರಾಷ್ಟ್ರೀಯ ಗೀತೆ ವಂದೇ ಮಾತರಂ ೧೫೦ ವರ್ಷ ಪೂರ್ಣಗೊಳಿಸಿದ್ದು, ಚುನಾವಣಾ ಸುಧಾರಣೆಗಳು ಸೇರಿದಂತೆ ಯಾವ ಯಾವ ವಿಷಯಗಳನ್ನು ಚರ್ಚೆ ನಡೆಸಬೇಕೆಂಬ ಬಗ್ಗೆ ತೀರ್ಮಾನಿಸಲಾಗಿದೆ ಎಂದರು.

**<>><><*><><<>**

ಜಲ ಜೀವನ್ ಯೋಜನೆಯಡಿ ೧೫ ಕೋಟಿಗೂ ಅಧಿಕ ಮನೆಗಳಿಗೆ ಶುದ್ಧ ಕುಡಿಯುವ ನೀರಿನ ಕೊಳಾಯಿ ಸಂಪರ್ಕ ಕಲ್ಪಿಸಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ, ಉತ್ತರಿಸಿದ ಜಲ ಶಕ್ತಿ ಸಚಿವ ಸಿ.ಆರ್ ಪಾಟೀಲ್, ನಾಲ್ಕು ಕೋಟಿ ಮನೆಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವ ಕೆಲಸ ಪ್ರಗತಿಯಲ್ಲಿದೆ ಎಂದು ಹೇಳಿದರು. ೨೦೧೯ ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ಪ್ರಾರಂಭಿಸಿದ ಜಲ ಜೀವನ್ ಮಿಷನ್, ಪ್ರತಿ ಮನೆಗೆ ಕೊಳಾಯಿ ನೀರಿನ ಸಂಪರ್ಕವನ್ನು ಒದಗಿಸುವ ಪ್ರಮುಖ ಯೋಜನೆಯಾಗಿದೆ.

ಹಿಮಾಲಯ ಮತ್ತು ಈಶಾನ್ಯ ರಾಜ್ಯಗಳಿಗೆ ಒದಗಿಸುವ ನಿಧಿಯ ಶೇಕಡ ೯೦ ರಷ್ಟನ್ನು ಕೇಂದ್ರ ಸರ್ಕಾರ ಒದಗಿಸುತ್ತದೆ ಎಂದರು.

<>><><*><><<>

೨೩ನೇ ಭಾರತ-ರಷ್ಯಾ ವಾರ್ಷಿಕ ಶೃಂಗಸಭೆಯಲ್ಲಿ ಭಾಗವಹಿಸಲು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಅಧಿಕೃತ ಭಾರತ ಭೇಟಿಗಾಗಿ ಇಂದು ನವದೆಹಲಿಗೆ ಆಗಮಿಸಲಿದ್ದಾರೆ. ಎರಡು ದಿನಗಳ ಭೇಟಿಯ ಸಮಯದಲ್ಲಿ, ಅಧ್ಯಕ್ಷ ಪುಟಿನ್ ನಾಳೆ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಇಬ್ಬರೂ ನಾಯಕರು ಪರಸ್ಪರ ಆಸಕ್ತಿಯ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಕುರಿತು ವಿಚಾರ ವಿನಿಮಯ ಮಾಡಿಕೊಳ್ಳಲಿದ್ದಾರೆ. ವ್ಯಾಪಾರ, ಆರ್ಥಿಕತೆ, ಆರೋಗ್ಯ ರಕ್ಷಣೆ, ಶೈಕ್ಷಣಿಕ, ಸಂಸ್ಕೃತಿ ಮತ್ತು ಮಾಧ್ಯಮಕ್ಕೆ ಸಂಬಂಧಿಸಿದ ಕ್ಷೇತ್ರಗಳು ಸೇರಿದಂತೆ ಹಲವು ಒಪ್ಪಂದಗಳಿಗೆ ಸಹಿ ಹಾಕುವ ನಿರೀಕ್ಷೆಯಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಷ್ಯಾದ ಅಧ್ಯಕ್ಷರನ್ನು ಸ್ವಾಗತಿಸುವುದರ ಜೊತೆಗೆ ಗೌರವಾರ್ಥ ಔತಣಕೂಟ ಆಯೋಜಿಸಿದ್ದಾರೆ. ಈ ಭೇಟಿಯು ಭಾರತ ಮತ್ತು ರಷ್ಯಾ ನಾಯಕತ್ವಕ್ಕೆ ದ್ವಿಪಕ್ಷೀಯ ಸಂಬಂಧಗಳಲ್ಲಿನ ಪ್ರಗತಿ ಪರಿಶೀಲಿಸಲು, ವಿಶೇಷ ಕಾರ್ಯತಂತ್ರದ ಪಾಲುದಾರಿಕೆಯನ್ನು ಬಲಪಡಿಸುವ ದೂರದೃಷ್ಟಿಯ ಸಾಕಾರಕ್ಕೆ ಅವಕಾಶವನ್ನು ಒದಗಿಸುತ್ತದೆ.

<>><><*><><<>

ದೇಶಾದ್ಯಂತ ಇಂದು ನೌಕಾದಿನವನ್ನು ಆಚರಿಸಲಾಗುತ್ತಿದೆ. ಭಾರತೀಯ ನೌಕಾಪಡೆಯ ಪಾತ್ರ ಮತ್ತು ಸಾಧನೆಗಳನ್ನು ಗುರುತಿಸಲು ಪ್ರತಿವರ್ಷ ಡಿಸೆಂಬರ್ ೪ ರಂದು ನೌಕಾ ದಿನವನ್ನಾಗಿ ಆಚರಿಸಲಾಗುತ್ತಿದೆ. ೧೯೭೧ರ ಇದೇ ದಿನ ಟ್ರೈಡೆಂಟ್ ಕಾರ್ಯಾಚರಣೆಯಲ್ಲಿ ಭಾರತೀಯ ನೌಕಾಪಡೆ ಪಿಎನ್‌ಎಸ್ ಖೈಬರ್ ಸೇರಿದಂತೆ ೪ ಪಾಕಿಸ್ತಾನಿ ಹಡಗುಗಳನ್ನು ಮುಳುಗಿಸುವ ಮೂಲಕ ವಿಜಯಪತಾಕೆ ಹಾರಿಸಿತ್ತು. ಕೇರಳದ ತಿರುವನಂತಪುರಂನ ಶಂಗುಮುಗಮ್ ಕಡಲ ತೀರದಲ್ಲಿ ಅತ್ಯದ್ಭುತ ಕಾರ್ಯಾಚರಣೆ ಪ್ರದರ್ಶನದ ಮೂಲಕ ಈ ವರ್ಷದ ನೌಕಾದಿನವನ್ನು ಆಚರಿಸಲಾಯಿತು.

<>><><*><><<>

ಇಂದು ನೌಕಾದಿನ. ಅದರ ಅಂಗವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಮತ್ತು ಪ್ರಧಾನಿ ನರೇಂದ್ರ ಮೋದಿ ಹಾಗೂ ಹಲವು ಕೇಂದ್ರ ಸಚಿವರು ಭಾರತೀಯ ನೌಕಾಪಡೆಯ ಎಲ್ಲ ಸಿಬ್ಬಂದಿ ನಿವೃತ್ತ ಯೋಧರು ಹಾಗೂ ಅವರ ಕುಟುಂಬದವರಿಗೆ ಶುಭ ಕೋರಿದ್ದಾರೆ. ರಾಷ್ಟ್ರಪತಿ ತಮ್ಮ ಸಂದೇಶದಲ್ಲಿ ಭಾರತೀಯ ನೌಕಾಪಡೆ, ಶಿಸ್ತು, ಸಹಿಷ್ಣುತೆ ಮತ್ತು ಉತ್ತರದಾಯಿ ತತ್ವಗಳನ್ನು ಮೈಗೂಡಿಸಿಕೊಂಡಿದೆ. ಅದು ದೇಶದ ವ್ಯಾಪಾರ ಮಾರ್ಗಗಳನ್ನು ಸುರಕ್ಷಿತಗೊಳಿಸುವುದಲ್ಲದೆ ಹಲವು ರಾಷ್ಟ್ರಗಳಿಗೆ ಮಾನವೀಯ ನೆರವನ್ನು ನೀಡುವುದರ ಜೊತೆಗೆ ನೀಲಿ ಆರ್ಥಿಕತೆಯನ್ನು ಬಲವರ್ಧನೆಗೊಳಿಸಿದೆ ಎಂದು ತಿಳಿಸಿದ್ದಾರೆ. ಉಪರಾಷ್ಟ್ರಪತಿ ಸಿ.ಪಿ.

ರಾಧಾಕೃಷ್ಣನ್ ಭಾರತದ ನೌಕಾಪಡೆ ದೇಶದ ಸಾಗರ, ಸಾಮರ್ಥ್ಯ, ಪಹರೆಯ ಸಂಕೇತವಾಗಿದ್ದು, ರಾಷ್ಟ್ರೀಯ ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ ಅದರ ಬದ್ಧತೆ ಶ್ಲಾಘನೀಯ ಎಂದು ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಈ ವರ್ಷದ ದೀಪಾವಳಿಯನ್ನು ಐಎನ್‌ಎಸ್ ವಿಕ್ರಾಂತ ಹಡಗಿನಲ್ಲಿ ನೌಕಾ ಸಿಬ್ಬಂದಿಯೊಂದಿಗೆ ಆಚರಿಸಿಕೊಂಡ ಕ್ಷಣಗಳನ್ನು ಸ್ಮರಿಸಿದ್ದಾರೆ. ಮತ್ತು ಭಾರತೀಯ ನೌಕಾಪಡೆ ಅಸಾಧಾರಣ ಶೌರ್ಯ ಹಾಗೂ ದೃಢತೆಗೆ ಹೆಸರುವಾಸಿಯಾಗಿದೆ. ಇತ್ತೀಚಿನ ದಿನಗಳಲ್ಲಿ ನೌಕಾಪಡೆ ಆಧುನೀಕರಣದ ಜೊತೆಗೆ ಸ್ವಾವಲಂಬನೆಗೆ ಒತ್ತು ನೀಡುತ್ತಿದೆ. ಇದರಿಂದಾಗಿ ದೇಶದ ಭದ್ರತಾ ಸಾಮರ್ಥ್ಯ ಗಣನೀಯವಾಗಿ ಹೆಚ್ಚಳವಾಗಿದೆ ಎಂದಿದ್ದಾರೆ.

**ಧ್ವನಿ : ಪ್ರಧಾನಿ ನರೇಂದ್ರ ಮೋದಿ (೩೬ ಸೆಕೆಂಡ್‌ಗಳು)**

**<>><><*><><<>**

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್-೨೦೨೬ರ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ಮತ್ತು ಚುನಾವಣಾ ಸಹಾಯ ಸಂಸ್ಥೆಯ- ಇಂಟರ್ ನ್ಯಾಷನಲ್ ಐಡಿಇಎ ಮಂಡಳಿಯ ಅಧ್ಯಕ್ಷತೆ ವಹಿಸಿಕೊಂಡಿದ್ದಾರೆ. ಜ್ಞಾನೇಶ್ ಕುಮಾರ್ ಸ್ವೀಡನ್‌ನ ಸ್ಟಾಕ್‌ಹೋಮ್‌ನಲ್ಲಿ ಅಧ್ಯಕ್ಷತೆ ವಹಿಸಿಕೊಂಡರು.

**<>><><*><><<>**

ಕತಾರ್‌ನ ದೋಹಾದಲ್ಲಿ ಇಂದಿನಿಂದ ಆರಂಭವಾಗಲಿರುವ ಅಂತಾರಾಷ್ಟ್ರೀಯ ಶೂಟಿಂಗ್ ಕ್ರೀಡಾ ಫೆಡರೇಷನ್-ಐಎಸ್‌ಎಸ್‌ಎಫ್ ವಿಶ್ವಕಪ್ ಫೈನಲ್‌ನಲ್ಲಿ ಸೆಣಸಲು ಭಾರತದ ಶೂಟರ್‌ಗಳು ಸಜ್ಜಾಗಿದ್ದಾರೆ. ಸಾಮ್ರಾಟ್ ರಾಣಾ ನೇತೃತ್ವದಲ್ಲಿ ಶೂಟರ್‌ಗಳಾದ ಸುರುಚಿ ಸಿಂಗ್ ಮತ್ತು ಮನುಬಾಕರ್ ಸೇರಿದಂತೆ ೧೫ ಆಟಗಾರರ ತಂಡ ಕ್ರೀಡಾಕೂಟದಲ್ಲಿ ಸೆಣಸಲಿದೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ ><><<>**